ನಾವೆಲ್ಲರೂ ಒಳಪಟ್ಟಿದ್ದೇವೆ. ಆದರೆ ಸರ್ಕಾರದವರು ಖಚಿತವಾದಂತಹ ಉತ್ತರವನ್ನು ಕೊಡಬೇಕು, ಇದು ಏನೂ ಅಂತಹ ದೊಡ್ಡ ಪ್ರಶ್ನೆಯಲ್ಲ. ಈಗ ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆ ಏನಿದೆ? ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಸರ್ಕಾರಿ ಜಮೀನು ಎಷ್ಟಿದೆ? ಒತ್ತುವರಿ ಜಮೀನು ಎಷ್ಟಿದೆ? ನಾನು ಕೇಳುವಂಥಾದ್ದು ಈ ಸರ್ಕಾರ ಹುಟ್ಟಿದ ಮೇಲೆ ಈ ಮುಜರಾಯಿ ಇಲಾಖೆ ಹುಟ್ಟಿದೆಯಾ? ಅಥವಾ ಮುಜರಾಯಿ ಇಲಾಖೆಯಲ್ಲಿ ಜಮೀನುಗಳು ಎಷ್ಟಿವೆ ಎಂಬ ಮಾಹಿತಿಗಳ ಕಡತ ಇಲ್ಲವೇ? ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಯವರನ್ನು ನಾನು ಕೇಳುವುದೇನೆಂದರೆ ಈ ಎಲ್ಲಾ ವಿಚಾರಗಳನ್ನು ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸಿ ಎಂಟು ದಿವಸದೊಳಗೆ ಮಾಡಬೇಕು. ಎಲ್ಲಾ ರೀತಿಯ ಅನುಕೂಲಗಳನ್ನು ಇಟ್ಟುಕೊಂಡು ಮಾಡುವುದಕ್ಕಾಗುವುದಿಲ್ಲವೆಂದರೆ ಹೇಗೆ? ಈಗ ಮಾನ್ಯ ಸದಸ್ಯರು ಯಾವುದೋ ಒಂದು ಪರ್ಟಿಕ್ಯುಲರ್ ಜಮೀನನ್ನು ಯಾರೋ ಅಕ್ವಾಯರ್ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ತಮಗೆ ಅಧಿಕಾರಿಗಳ ಮೇಲೆ ಹಿಡಿತವಿಲ್ಲದಿದ್ದರೆ ಈ ರೀತಿ ಎಲ್ಲಾ ಆಗುತ್ತದೆ. ಇವರನ್ನು ತಕ್ಷಣ ಕರೆಸಿ ಸಭೆ ಮಾಡಿ 4-5 ದಿವಸಗಳಲ್ಲಿ ಸಂಬಂಧಪಟ್ಟಂತಹ ಮಾಹಿತಿಗಳನ್ನು ತರಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗುತ್ತದೆಂದರೆ, ಎಂಡೌವ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿರುವಂತಹ ಜಮೀನುಗಳ ಮಾಹಿತಿಯನ್ನು ಕೇಳಿದ್ದಾರೆ. ಅನೇಕ ಸಲ ಇಲ್ಲಿ ಟೆನೆಂಟೆಡ್ ಲ್ಯಾಂಡ್ಸ್ ಇರುತ್ತವೆ. ಕೆಲವು ಸಲ ದೇವಸ್ಥಾನದ ಹತ್ತಿರ ಸ್ವಂತ ಭೂಮಿ ಇಟ್ಟುಕೊಳ್ಳುವಂಥಾದ್ದು ಇದೆ. ಇವೆಲ್ಲವನ್ನು ನಾಲ್ಕೈದು ದಿವಸಗಳಲ್ಲಿ ತರಿಸುವುದಕ್ಕೆ ಆಗುವುದಿಲ್ಲ. ನಾವು ಹದಿನೈದು ದಿವಸಗಳಲ್ಲಿ ಕಾಲಾವಕಾಶವನ್ನು ಕೊಟ್ಟು ಮಾಹಿತಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಅದು ಬರುವುದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಕಾಲಾವಕಾಶದಲ್ಲಿ ತಡವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಇದೊಂದೇ ಪ್ರಶ್ನೆಯನ್ನು ಕೇಳುತ್ತಿಲ್ಲ. ವಿರೋಧಪಕ್ಷದಲ್ಲಿರುವಂಥವರಿಗೆ, ಇತರ ಸದಸ್ಯರುಗಳಿಗೆ ಪ್ರಶ್ನೋತ್ತರ ಅವಧಿಯ ಪ್ರಯೋಗೇಟೀವ್ ಇರುವಂಥಾದ್ದು ಮಾಹಿತಿಗಳನ್ನು ತರಿಸಿಕೊಳ್ಳುವಂಥಾದ್ದಕ್ಕೆ, ಅದನ್ನು ತಾವು ಕೊಡುವುದಕ್ಕಾಗುವುದಿಲ್ಲವೆಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ, ಕೊಡುವುದಿಲ್ಲವೆಂದು ಹೇಳಿಲ್ಲ. ಅವರು ಕಾಲಾವಕಾಶ ಕೊಡಿ ಎಂದು ಕೇಳಿದ್ದಾರೆ.

ಅಧ್ಯಕ್ಷರು : ಆಯಿತು, ಉತ್ತರವನ್ನು ಶನಿವಾರದೊಳಗೆ ತರಿಸಿಕೊಡಿ.

ಕೆ.ಇ.ಬಿ.ಯಲ್ಲಿ ಸೆಕ್ಷನ್ ಆಫೀಸರ್ ಹುದ್ದೆಗಳ ಭರ್ತಿ

598 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ರಾಜ್ಯಾದ್ಯಂತ ಖಾಲಿ ಇರುವ ಸೆಕ್ಷನ್ ಆಫೀಸರ್ ಹುದ್ದೆಗಳ ಸಂಖ್ಯೆ ಎಷ್ಟು? ಹಾಗೂ ಲೈನ್‌ಮನ್ ಹುದ್ದೆಗಳ ಸಂಖ್ಯೆ ಎಷ್ಟು?*

2. *ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು? ವಿವರ ನೀಡುವುದು.*

ಶ್ರೀ ವೀರಕುಮಾರ್ ಅ: ಪಾಟೀಲ್ (ಇಂಧನ ರಾಜ್ಯ ಸಚಿವರು) :

1. ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ರಾಜ್ಯಾದ್ಯಂತ ಇರುವ ಕಛೇರಿಗಳಲ್ಲಿ ಒಟ್ಟು 276 ಸೆಕ್ಷನ್ ಆಫೀಸರ್ ಹುದ್ದೆಗಳು ಖಾಲಿ ಇರುತ್ತವೆ. ಹಾಗೂ ಒಟ್ಟು 1523 ಲೈನ್‌ಮೆನ್ ಮತ್ತು 5784 ಸಹಾಯಕ ಲೈನ್‌ಮೆನ್ ಹುದ್ದೆಗಳು ಖಾಲಿ ಇರುತ್ತವೆ.

2. ನಿಗಮದಲ್ಲಿ ಸಿಬ್ಬಂದಿ ಕೊರತೆಯಿಂದ ನಿರ್ವಹಣೆ ಕೆಲಸಕ್ಕೆ ಹಾಗೂ ಗ್ರಾಹಕರಿಗೆ ಅಗತ್ಯ ಸೇವೆ ಒದಗಿಸಲು ಆಗುತ್ತಿರುವ ತೊಂದರೆಯನ್ನು ಗಮನಿಸಿ, ಸೆಕ್ಷನ್ ಆಫೀಸರ್ಸ್ ಹಾಗೂ ಸಹಾಯಕ ಲೈನ್‌ಮೆನ್ ಹುದ್ದೆಗಳು ಸೇರಿದಂತೆ, ಅವಶ್ಯಕವಿರುವ 2200 ವಿವಿಧ ಹುದ್ದೆಗಳ ನೇಮಕಾತಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂತಹ ಪ್ರಶ್ನೆಗೆ ಸರ್ಕಾರ ಉತ್ತರವನ್ನು ಕೊಟ್ಟಿದೆ. ನಾನು ರಾಜ್ಯದಲ್ಲಿ ಕೆ.ಇ.ಬಿ. ಸೆಕ್ಷನ್ ಆಫೀಸರ್ಸ್ ಹುದ್ದೆಗಳು ಎಷ್ಟು ಖಾಲಿ ಇದೆ? ಸಹಾಯಕ ಲೈನ್‌ಮೆನ್‌ಗಳ ಹುದ್ದೆಗಳು ಎಷ್ಟು ಖಾಲಿ ಇವೆ? ಲೈನ್‌ಮೆನ್‌ಗಳ ಹುದ್ದೆಗಳು ಎಷ್ಟು ಖಾಲಿ ಇವೆ? ಎಂದು ಕೇಳಿದ್ದೇನೆ. ಅದಕ್ಕೆ ಇವರು 276 ಸೆಕ್ಷನ್ ಆಫೀಸರ್ಸ್ ಹುದ್ದೆಗಳು, 1523 ಲೈನ್‌ಮೆನ್ ಮತ್ತು 5784 ಸಹಾಯಕ ಲೈನ್‌ಮೆನ್ ಹುದ್ದೆಗಳು ಖಾಲಿ ಇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಹುದ್ದೆಗಳನ್ನು ತುಂಬಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವಂಥಾದ್ದಕ್ಕೆ ಉತ್ತರ ಕೊಟ್ಟಿದ್ದಾರೆ. ಈಗ ಕೆ.ಇ.ಬಿ. ನಾರ್ಮ್ಸ್ ಪ್ರಕಾರ ಏನಾಗಿದೆ ಎಂದರೆ ಅರ್ಬನ್ ಮತ್ತು ರೂರಲ್ ಕೇಂದ್ರಗಳಲ್ಲಿ ಸೆಕ್ಷನ್ ಆಫೀಸರ್ಸ್ ಹುದ್ದೆಗೆ ಬಿ.ಇ. ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ತುಂಬಬೇಕು, ಅದೇ ರೀತಿಯಲ್ಲಿ ಎಲೆಕ್ಟ್ರಿಕ್ ವಲಯದಲ್ಲಿ ಡಿಪ್ಲೊಮೊ ಅಭ್ಯರ್ಥಿಗಳನ್ನು ಸೆಕ್ಷನ್ ಆಫೀಸರ್ಸ್ ಎಂದು ತುಂಬಬೇಕು. ಈ ವಿಚಾರವಾಗಿ ನಾನು ನನ್ನ ಕ್ಷೇತ್ರದ ಬಗ್ಗೆ ಹೇಳಲಿಚ್ಛಿಸುತ್ತೇನೆ. ಅಲ್ಲಿ 13 ಸೆಕ್ಷನ್ ಆಫೀಸರ್ ಹುದ್ದೆಗಳು ಇದ್ದು ಬಾಗಲಕೋಟೆ ಡಿವಿಜನ್‌ನಲ್ಲಿ 6 ಕಡೆಗಳಲ್ಲಿ ಸೆಕ್ಷನ್ ಆಫೀಸರ್ಸ್ ಆಗಿ ಕೆಲಸ ಮಾಡುತ್ತಿರುವಂಥವರು ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪಾಸು ಮಾಡಿರುವಂಥವರು ಈ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ ಎಫಿಶಿಯೆನ್ಸಿ ಸರಿಯಾಗಿ ಇಲ್ಲದ ಕಾರಣದಿಂದಾಗಿ ಅನೇಕ ಸಾರಿ ಲೋ-ವೋಲ್ಟೇಜ್ ಪ್ರಾಬ್ಲಂ ಎಲ್ಲಾ ಕಡೆ ಇದೆ. ಇದನ್ನು ಇಂಪ್ರೂವ್‌ಮೆಂಟ್ ಮಾಡುವಂತಹ ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮರ್‌ನಲ್ಲಿ ಎಷ್ಟು ಲೋಡ್ ಆಗಬೇಕೆಂಬುದು ಗೊತ್ತಾಗದೆ ಇವು ಬರ್ನ್ ಆಗುವಂಥಾದ್ದು ನಡೆಯುತ್ತಿದೆ. ಇದರಿಂದ ಸುಮಾರು 30-40 ಸಾವಿರ ರೂಪಾಯಿಗಳಿಂದ 70-80 ಸಾವಿರ ರೂಪಾಯಿಗಳ ಖರ್ಚು ಆಗುವಂಥಾದ್ದು ಇದೆ. ಈ ರೀತಿಯಾಗಿ ಇನ್-ಎಫಿಶಿಯೆಂಟ್ ಕ್ಯಾಂಡಿಡೇಟ್‌ಗಳನ್ನು ಹುದ್ದೆಗಳಿಗೆ ತುಂಬುವುದರಿಂದ ಸರ್ಕಾರದ ಬೊಕ್ಕಸಕ್ಕೆ, ಕೆ.ಇ.ಬಿ. ಇಲಾಖೆಗೆ ಲುಕ್ಸಾನ್ ಆಗುತ್ತಿದೆ ಎಂಬ ವರದಿಯನ್ನು ನಾನು ಕೇಳಿದ್ದೇನೆ. ಈಗ ಮತ್ತಷ್ಟು ತೊಂದರೆ

ಮಾಡಿಕೊಳ್ಳುವಂಥಾದ್ದು, ಲುಕ್ಸಾನು ಮಾಡಿಕೊಳ್ಳುವಂಥಾದ್ದು, ಕೋಟ್ಯಾಂತರ ರೂಪಾಯಿಗಳ ಹಾನಿಯಾಗುವಂಥಾದ್ದು ಇದರ ಜೊತೆಗೆ ಸಹಾಯಕ ಲೈನ್‌ಮೆನ್‌ಗಳು ಕೊರತೆ ಕೂಡ ಇದೆ. ನಮ್ಮ ಕ್ಷೇತ್ರದಲ್ಲಿ ಇವತ್ತು ಶೇಕಡ 70ರಷ್ಟು ಲೈನ್‌ಮೆನ್‌ಗಳ ಹುದ್ದೆಗಳು ಖಾಲಿ ಇವೆ. 20-25 ಹಳ್ಳಿಗೆ ಒಬ್ಬ ಲೈನ್‌ಮೆನ್ ಇದ್ದಾನೆ, ಯಾರಾದರೂ ಒಬ್ಬ ರೈತ ರಿಪೇರಿ ಮಾಡಲು ದೂರು ಕೊಟ್ಟರೆ 8-10 ದಿವಸಗಳಾದರೂ ರಿಪೇರಿ ಮಾಡಲು ಒಬ್ಬ ಲೈನ್‌ಮೆನ್ ಬರುವುದಿಲ್ಲ. 4-5 ಹಳ್ಳಿಗಳಿಗೆ ಒಬ್ಬ ಲೈನ್‌ಮನ್ ಕೊಟ್ಟರೆ ಅನುಕೂಲವಾಗುತ್ತದೆ. ಲೈನ್‌ಮೆನ್‌ಗಳನ್ನು ನೇಮಕ ಮಾಡಿಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಯಾವಾಗ ನೇಮಕ ಮಾಡಿಕೊಳ್ಳಲಾಗುವುದೆನ್ನುವುದನ್ನು ಅವರು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಗೌರವಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ, ಪ್ರಶ್ನೋತ್ತರ ವೇಳೆಯನ್ನು ಲಂಬಿಸಿಕೊಂಡು ಹೋಗುವುದಕ್ಕೂ ಒಂದು ಇತಿಮಿತಿ ಇದೆ. ಆ ಕಡೆ, ಈ ಕಡೆಯ ಸದಸ್ಯರು, ಪ್ರಿಸೈಸ್, ಇಲಿಸಿಟ್ ಅವಶ್ಯಕವಿರುವ ವೃತ್ತಾಂತ ಮಾಹಿತಿಗಳನ್ನು ಪಡೆದುಕೊಳ್ಳುವುದಕ್ಕೆ ನಾನು ಪ್ರಶ್ನೋತ್ತರ ವೇಳೆಯನ್ನು ಸೀಮಿತಗೊಳಿಸಬೇಕೇ ಹೊರತು, ಅದನ್ನು ಚರ್ಚಾಸ್ಪದವಾದ ವಸ್ತುವನ್ನಾಗಿ ಮಾಡಿದರೆ ಸದನ ನಡೆಸುವುದು ಕಷ್ಟವಾಗುತ್ತದೆ. ಉದಾಹರಣೆಗೆ ಇನ್ನೂ ಸಾಕಷ್ಟು ಬಿಲ್‌ಗಳಿವೆ, ಇದುವರೆಗೆ ಕೇವಲ 6 ಬಿಲ್‌ಗಳು ಮಾತ್ರ ಪಾಸ್ ಆಗಿವೆ, 17ನೇ ತಾರೀಖು ಈ ಅಧಿವೇಶನ ಮುಕ್ತಾಯವಾಗುತ್ತದೆ. ಆದುದರಿಂದ ಇದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ನಾವು ಒಪ್ಪುತ್ತೇವೆ, ಪ್ರಶ್ನೋತ್ತರ ವೇಳೆಯಲ್ಲಿ ಭಾಷಣ ಮಾಡಬಾರದು, ಸಮಯವನ್ನು ವ್ಯಯಮಾಡಬಾರದು. ಆದರೆ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಖಚಿತವಾದ ಉತ್ತರವನ್ನು ಕೊಡಬೇಕಾಗುತ್ತದೆ, ಒಂದು ವಿಚಾರವನ್ನೇ ವಿವರಿಸಿಕೊಂಡಿದ್ದರೆ ಆಗುವುದಿಲ್ಲ. ಎರಡನೆಯದಾಗಿ, ಇಂತಹದೇ ಉತ್ತರಕೊಡಬೇಕೆಂದು ನಾವು ಅಪೇಕ್ಷೆ ಮಾಡುವುದಿಲ್ಲ. ಆದರೆ ನಿರ್ದಿಷ್ಟ ಉತ್ತರ ಕೊಡದೆ ಭಾಷಣ ಮಾಡುವುದನ್ನು ನಾವು ನೋಡುತ್ತಿದ್ದೇವೆ, ಅವರ ಮೇಲೂ ಕೂಡ ತಾವು ನಿಯಂತ್ರಣವನ್ನು ಹೊಂದಬೇಕಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ನಾವು ವಿಶೇಷವಾಗಿ ತಮ್ಮಿಂದ ಮಂತ್ರಿಗಳಿಗೆ ರಿಯಾಯಿತಿಯನ್ನು ಕೇಳುತ್ತಿಲ್ಲ, ನನ್ನನ್ನು ವಿರೋಧಪಕ್ಷದಲ್ಲಿರುವವರನ್ನು, ಇಲ್ಲಿರುವವರನ್ನು ನಿಯಂತ್ರಣ ಮಾಡುವುದಕ್ಕೆ ತಮಗೆ ಸಂಪೂರ್ಣವಾದ ಹಕ್ಕಿದೆ, ಅದಕ್ಕೆ ನಾವು ತಲೆಬಾಗುತ್ತೇವೆ.

ಶ್ರೀ ವಿ.ಎ. ಪಾಟೀಲ್ : ಕೆಪಿಟಿಸಿಎಲ್-ನಲ್ಲಿ ಹುದ್ದೆಗಳನ್ನು ತುಂಬಲು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ, ಅದು ಹಣಕಾಸು ಇಲಾಖೆಯಲ್ಲಿದ್ದು, ಇನ್ನು 3 ತಿಂಗಳಲ್ಲಿ ಅದನ್ನು ಕ್ಲಿಯರ್ ಮಾಡ, ನೇಮಕಾತಿಯನ್ನು ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಅವರು ಕೊಟ್ಟಿರುವ ಉತ್ತರ ನೋಡಿದಾಗ ಕೆಪಿಟಿಸಿಎಲ್ ಯಾವರೀತಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಅದು ಕೈಗನ್ನಡಿಯಾಗಿದೆ. 7583 ವಿವಿಧ ವೃಂದದ ಹುದ್ದೆಗಳು ಖಾಲಿ ಇವೆ ಎಂದು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅದರಲ್ಲಿ 2200 ಹುದ್ದೆಗಳನ್ನು ತುಂಬಲು ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ, ಪರಿಶೀಲನೆ ಮಾಡಿ ಯಾವ ವರ್ಷದಲ್ಲಿ ಈ ಲೈನ್‌ಮೆನ್‌ಗಳನ್ನು ಕೊಡುತ್ತೀರಿ? ಲೈನ್‌ಮೆನ್ ನೇಮಕಾತಿ ಮಾಡದೆ ಎಷ್ಟು ವರ್ಷಗಳಾಗಿವೆ? ನಿಮ್ಮ ಇಲಾಖೆಯ ಕಾರ್ಯವ್ಯಾಪ್ತಿ ಎಷ್ಟು ಕಿ.ಮೀ.ವರೆಗೆ ವಿಸ್ತರಿಸುತ್ತಿದೆ? ನಿಮ್ಮ ಇಲಾಖೆಯಲ್ಲಿ ಈ ಬಗ್ಗೆ ಏನು ಗುಣಾತ್ಮಕ ಪರಿವರ್ತನೆಯಾಗುತ್ತಿದೆ? 7583 ಹುದ್ದೆಗಳನ್ನು ಯಾವಾಗ ತುಂಬುತ್ತೀರಿ? ದಯವಿಟ್ಟು ನಿರ್ದಿಷ್ಟವಾಗಿ ಹೇಳಿ.

ಶ್ರೀ ವಿ.ಎ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ನೇಮಕಾತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ, ಬರುವ 2-3 ತಿಂಗಳಲ್ಲಿ ನೇಮಕಾತಿ ಮಾಡುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಅನೇಕ ಕಡೆ ಸಬ್-ಸ್ಟೇಷನ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದೀರಿ, ಈ ಗುತ್ತಿಗೆದಾರರೇ ಕೆಲಸ ಮಾಡುತ್ತಿದ್ದಾರೆ, ಏನಾದರೂ ಅವರಿಗೆ ಅಪಾಯ ಸಂಭವಿಸಿದರೆ ಏನು ಪರಿಹಾರ ಕೊಡುತ್ತೀರಿ? ತಮಗೆ ಅವರ ಮೇಲೆ ಏನು ಹಿಡಿತ ಇದೆ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ಇದು ಅವರ ಖಾತೆಯ ವ್ಯಾಪ್ತಿಯಲ್ಲಿ ಬರುತ್ತದೆ, ಇದು ಪ್ರತಿದಿವಸ ರಾಜ್ಯದ ಜನತೆಯ ಸಮಸ್ಯೆಯಾಗಿದೆ, ಇದನ್ನು ಸರಿಮಾಡಲು ಏನು ಕ್ರಮ ತೆಗೆದುಕೊಳ್ಳುತ್ತಾರೆನ್ನುವುದನ್ನು ಅವರು ದಯಮಾಡಿ ಹೇಳಬೇಕು. ಈ ಹುದ್ದೆಗಳನ್ನು ನೇಮಕ ಮಾಡಿಕೊಳ್ಳದಿದ್ದರೆ, ಜನತೆಗೆ ನಾವು ಯಾವ ಸವಲತ್ತು ಕೊಟ್ಟಂತಾಗುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ಕೆಪಿಟಿಸಿಎಲ್ ಅನ್ನು ಖಾಸಗೀಕರಣ ಮಾಡಲಾಗುವುದೆನ್ನುವ ವದಂತಿಗಳಿವೆ, ಅದರಿಂದ ಈ ಹುದ್ದೆಗಳನ್ನು ತುಂಬಲು ತಡವಾಗುತ್ತಿದೆಯೇ ಹೇಗೆ? ಅದನ್ನು ಖಾಸಗೀಕರಣ ಮಾಡಲಾಗುವುದೇ ಅಥವಾ ಈಗ ಇರುವುದನ್ನು ಸುಧಾರಿಸುವುದಕ್ಕೆ ಏನು ಕ್ರಮ ಕೈಗೊಳ್ಳಲಾಗುವುದೆಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಇದು ಜ್ವಲಂತವಾದ ಸಮಸ್ಯೆ, ಇದು ಎಲ್ಲರನ್ನೂ ಒಂದಲ್ಲ ಒಂದು ರೀತಿಯಲ್ಲಿ ಅನುಭೋಗಿಗಳನ್ನು, ಉತ್ಪಾದಕರನ್ನು, ವಿತರಕರನ್ನು ಬಾಧಿಸುತ್ತಿದೆ. ಕಳೆದ ಹತ್ತಾರು ವರ್ಷಗಳಿಂದ ಸಹಸ್ರಾರು ಹುದ್ದೆಗಳು ಅಲ್ಲಿ ಖಾಲಿ ಇವೆ. ಆದುದರಿಂದ ಇಲ್ಲಿ ಮ್ಯಾನ್‌ಪವರ್ ಎಷ್ಟು ಬೇಕು ಎನ್ನುವುದು ಒಂದಾದರೆ, ಎರಡನೆಯದಾಗಿ ವಿತರಣೆಯನ್ನು ಖಾಸಗೀಕರಣಗೊಳಿಸುವುದಕ್ಕೆ ತಾತ್ವಿಕವಾಗಿ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ, ಆ ಹಿನ್ನೆಲೆಯಲ್ಲಿ ಎಷ್ಟು ಹುದ್ದೆಗಳನ್ನು ತುಂಬಬೇಕು ಅಥವಾ ತುಂಬಬಾರದು ಎಂಬುದರ ಕಡೆಗೆ ಸರ್ಕಾರ ಗಮನವನ್ನು ಹರಿಸುತ್ತದೆ.